**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1520/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಮೇಗೌಡ ಪಿ | ಪ್ರಾಸಾ-10 |
| ತಂದೆಯ ಹೆಸರು | : ಪರ್ವತೇ ಗೌಡ | ಚಾಸಾ-15 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿ.ಪಿ.ಐ. | ದಿನಾಂಕಃ 13.01.2026. |
| ವಾಸಸ್ಥಳ | : ಆಲ್ದೂರು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.10.11.2022 ರಿಂದ ದಿ.15.01.2025 ರವರೆಗೂ ಮೂಡಿಗೆರೆಯ ಪೋಲಿಸ್ ಠಾಣೆಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.23.03.2023 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಶ್ರೀ ರನ್ನೇಗೌಡ ಪಾಟೀಲ್ ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರು ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-8 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.02.04.2023 ರಂದು ಪ್ರಸ್ತುತ ಪ್ರಕರಣದ ಆರೋಪಿಗೆ ಸಂಬಂಧಪಟ್ಟಂತೆ ಚಾಸಾ-11 ರವರಿಂದ ಮಾಹಿತಿಯನ್ನು ಪಡೆದು, ನಾನು ಮತ್ತು ಚಾಸಾ-11 ರವರು ಬೆ.11.00 ರ ಸಮಯಕ್ಕೆ ಬಣಕಲ್ ಗ್ರಾಮದ ಸುಭಾಶ್ ನಗರದಲ್ಲಿ ವಾಸವಿರುವ ಆರೋಪಿಯು ತಾನು ತನ್ನ ಮನೆಯಲ್ಲಿದ್ದು, ವಿಚಾರಣೆಯ ಸಂಬಂಧ ಆರೋಪಿಯನ್ನು ಬಣಕಲ್ ಠಾಣೆಗೆ ಕರೆದುಕೊಂಡು ಬಂದು, ನಂತರ ಪ್ರಕರಣದ ಬಗ್ಗೆ ಕೂಲಂಕುಶವಾಗಿ ವಿಚಾರಿಸಲಾಗಿ ಆರೋಪಿಯು ತಪ್ಪು ಒಪ್ಪಿಕೊಂಡ ಮೇರೆಗೆ ಮ.12.30 ರ ಸಮಯಕ್ಕೆ ದಸ್ತಗಿರಿ ಮಾಡಿ ಮತ್ತು ದಸ್ತಗಿರಿ ಕ್ರಮವನ್ನು ಅನುಸರಿಸಿ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಆರೋಪಿಯ ಹೇಳಿಕೆಯಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸುವ ಸಲುವಾಗಿ ಪಂಚರಾದ ಚಾಸಾ-4 ಮತ್ತು 5 ರವರನ್ನು ಬರಮಾಡಿಕೊಂಡು ಸದರಿಯವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಹಾಜರಾಗಲು ಕೋರಿಕೊಂಡ ಮೇರೆಗೆ ಅವರು ಒಪ್ಪಿದ್ದು ಅವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ.

ನಂತರ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-1 ರವರ ವಾಸದ ಮನೆಯಲ್ಲಿ ಮಹಜರ್ ಕ್ರಮವನ್ನು ಜರುಗಿಸಲಾಗಿರುತ್ತದೆ. ನಂತರ ಮುಂದುವರೆದು ಆರೋಪಿಯು ತಾನು ಕಳುವು ಮಾಡಿದ್ದ ವಸ್ತುಗಳನ್ನು ಬಚ್ಚಿಟ್ಟಿರುವ ಸ್ಥಳವಾದ ಬಸಣ್ಣಿ ನಾಗರಾಜ್ ರವರ ತೋಟದ ಉತ್ತರ ಭಾಗದಲ್ಲಿರುವ ಹಾಲುವಾನದ ಮರದ ಬುಡದಲ್ಲಿ ಬಚ್ಚಿಟ್ಟಿರುವ ಸ್ಥಳವನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಮ.3.00 ರಿಂದ 4.00 ರ ಸಮಯದಲ್ಲಿ ಮಹಜರ್ ಕ್ರಮವನ್ನು ಜರುಗಿಸಿರುತ್ತೇವೆ. ನಂತರ ಅದೇ ದಿನ ಆರೋಪಿಯು ಚಿನ್ನವನ್ನು ಮಾರಾಟ ಮಾಡಿರುವ ಮೂಡಿಗೆರೆಯ ಸುಮತಿ ಜ್ಯುವೆಲ್ಲರ್ ನ್ನು ತೋರಿಸಿದ ಮೇರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ್ ಕ್ರಮವನ್ನು ಸ.5.45 ರಿಂದ 6.30 ರವರೆಗೂ ಜರುಗಿಸಲಾಗಿರುತ್ತದೆ. ಅದೇ ದಿನ ಚಾಸಾ-

6 ಮತ್ತು 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಮಾನತುಪಡಿಸಿಕೊಂಡ ಚಿನ್ನದ ಒಡವೆಗಳನ್ನು ಬಣಕಲ್ ಪೋಲಿಸ್ ಠಾಣೆಯ ಮಾಲುಪಟ್ಟಿ ಸಂಖ್ಯೆ 18/2023 ರಲ್ಲಿ ನೊಂದಾಯಿಸಿ, ನ್ಯಾಯಾಲಯದ ಅನುಮಾತಿಯನ್ನು ಕೋರಿರುತ್ತೇನೆ. ಅದೇ ದಿನ ಚಾಸಾ-1, ಚಾಸಾ-8 ರಿಂದ 10 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ರಿಮಾಂಡ್ ಅರ್ಜಿಯನ್ನು ತಯಾರಿಸಿ ಠಾಣೆಯ ಸಿಬ್ಬಂಧಿಯು ಮುಖಾಂತರ ನ್ಯಾಯಾಲಯದ ಅನುಮತಿಗಾಗಿ ಕಳುಹಿಸಿಕೊಟ್ಟಿರುತ್ತೇನೆ.

ದಿ.03.04.2023 ರಂದು ಚಾಸಾ-11 ಮತ್ತು 12 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-12 ರವರಿಂದ ತನಿಖೆ ಕಾಲದಲ್ಲಿ ತೆಗೆದ ಫೋಟೋಗಳ ಬಾಬ್ತು ಕಲಂ 65ಬಿ ರಡಿಯ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿ.05.04.2023 ರಂದು ಚಾಸಾ-1 ರವರನ್ನು ಠಾಣೆಗೆ ಬರ ಮಾಡಿಕೊಂಡು ಒಡವೆಗಳನ್ನು ಖರೀದಿಸಿದ ಬಾಬ್ತು ರಶೀದಿಯನ್ನು ಕೇಳಲಾಗಿ ಸದರಿಯವರು ಹಾಜರುಪಡಿಸಿರುತ್ತಾರೆ. ನಂತರ ಚಾಸಾ-1 ರವರಿಂದ ನಷ್ಟ ಭರ್ತಿ ಪರಿಹಾರ ಬಾಂಡ್ ನ್ನು ಪಡೆದುಕೊಂಡು, ನ್ಯಾಯಾಲಯದ ಆದೇಶದ ಮೇರೆಗೆ ಸದರಿ ಒಡವೆಗಳನ್ನು ಚಾಸಾ-1 ರವರಿಗೆ ಹಸ್ತಾಂತರಿಸಲಾಯಿತು. ದಿ.07.08.2023 ರಂದು ಬಣಕಲ್ ನ ಪಿ.ಡಿ.ಒ. ಗೆ ಚಾಸಾ-1 ರವರ ಮನೆಯ ಕುರಿತು ದಾಖಲಾತಿ ಕೋರಿ ಮನವಿಯನ್ನು ಮಾಡಿದ್ದು, ದಿ.19.08.2023 ರಂದು ಸದರಿಯವರು ವರದಿಯನ್ನು ನೀಡಿರುತ್ತಾರೆ, ಅದನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ತನಿಖೆಯು ಮುಕ್ತಾಯಗೊಂಡಿದ್ದು, ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋ.ಪ.ಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-10 ಮತ್ತು 12 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-10(ಸಿ) ಮತ್ತು 12(ಸಿ) ಎಂದು ಗುರುತಿಸಲಾಯಿತು. ನಿಪಿ-11, 13, 14 ಮತ್ತು 15 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಚಾಸಾ-1 ರವರಿಂದ ಒಡವೆಗಳಿಗೆ ಸಂಬಂಧ ಪಟ್ಟಂತೆ 4 ರಶೀದಿ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ರಶೀದಿಗಳನ್ನು ನಿಪಿ-17 ರಿಂದ 20 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-17(ಎ) ರಿಂದ 20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.02.04.2023 ರಂದು ಆರೋಪಿಯಿಂದ ಪಡೆದ ಸ್ವ ಇಚ್ಛಾ ಹೇಳಿಕೆ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-21 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಚಾಸಾ-6 ರವರು ನಿಪಿ-16 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ-8 ಮತ್ತು 9 ರಲ್ಲಿ ಫೋಟೋದಲ್ಲಿ ಕಾಣುವ ಒಡವೆಗಳನ್ನು ನಾವು ಆ ದಿನ ವಶಕ್ಕೆ ಪಡೆದಿರುವ ಒಡವೆಗಳು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಬಿ.ಎಸ್. ವಕೀಲರಿಂದಃ**

ದಿ.23.03.2023 ರಂದು ರನ್ನಗೌಡ ಪಾಟೀಲ್ ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-8 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿ.07.04.2023 ರಂದು ಚಾಸಾ-1 ರವರು ನೀಡಿದ ಮಾಹಿತಿಯ ಮೇರೆಗೆ ನಾವುಗಳು ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ರೀತಿಯ ದಸ್ತಗಿರಿ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಯಾವುದೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-4 ಮತ್ತು 5 ರವರನ್ನು ಬರ ಮಾಡಿಕೊಂಡು ಕೃತ್ಯ ಸ್ಥಳದ ಮಹಜರ್ ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯವರು ತೋರಿಸಿದ ಮೇರೆಗೆ ಅವರು ಕಳುವು ಮಾಡಿ ಮಾರಾಟ ಮಾಡಿದ ವಸ್ತುಗಳನ್ನು ವಶಕ್ಕೆ ಪಡೆದು ಅದಕ್ಕೆ ಸಂಬಂಧಿಸಿದಂತೆ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಠಾಣಾ ಸಿಬ್ಬಂಧಿಯಾದ ಚಾಸಾ-11 ಮತ್ತು 12 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಾವು ಬಣಕಲ್ ಪಿ.ಡಿ.ಒ. ಗೆ ಯಾವುದೇ ರೀತಿಯ ಮನವಿ ಪತ್ರವನ್ನು ಸಲ್ಲಿಸದೇ ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ದಸ್ತಗಿರಿ ಕ್ರಮವನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೆ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ದೋ.ಪ.ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.